## ಮದ್ಯಪಾನದ ಪರಿಣಾಮ

ಮದ್ಯಪಾನದ ವ್ಯಸನಕ್ಕೀಡಾದ ಮಹಿಳೆ ಗರ್ಭ ಧರಿಸಿದಾಗ, ಗರ್ಭಾವಸ್ಥೆಯ ಮೊದಲ ತ್ರೈಮಾಸಿಕದಲ್ಲಿ ಬೆಳೆಯುವ ಭ್ರೂಣದ ಮೇಲೆ ಆಲ್ಕೋಹಾಲ್‌ನ ಪ್ರಭಾವ ಅತ್ಯಧಿಕ. ಹೃದಯ, ಮೆದುಳು ಮುಂತಾದ ಶರೀರದ ಪ್ರಮುಖ ಅಂಗಗಳ ಬೆಳವಣಿಗೆ ಆ ಸಮಯದಲ್ಲಿ ಗರಿಷ್ಠ ಮಟ್ಟದಲ್ಲಿರುವುದರಿಂದ ಅವುಗಳ ಮೇಲೆ ಆಲ್ಕೋಹಾಲ್ ನೇರವಾಗಿ ಪ್ರಭಾವ ಬೀರಿ ಹಲವು ಅಂಗವೈಕಲ್ಯಗಳಿಗೆ ಕಾರಣವಾಗುತ್ತದೆ. ಮದ್ಯ ಸೇವನೆಯ ಪ್ರಮಾಣ ಅಧಿಕವಾಗಿದ್ದಷ್ಟೂ ಭ್ರೂಣದ ಮೇಲೆ ಅದರ ವ್ಯತಿರಿಕ್ತ ಪರಿಣಾಮ ಹೆಚ್ಚು. ಹಾಗೆಯೇ ಗರ್ಭಿಣಿಯ ವಯಸ್ಸು ಹೆಚ್ಚಿಗೆ ಇದ್ದಾಗಲೂ ಸಹ ಭ್ರೂಣದ ಮೇಲೆ ಆಲ್ಕೋಹಾಲ್‌ನ ದುಷ್ಪರಿಣಾಮ ಅಧಿಕ. ಮದ್ಯಪಾನದಿಂದ ಬೆಳೆಯುವ ಮಗುವಿನಲ್ಲಿ ಕಾಣಿಸಿಕೊಳ್ಳುವ ಕೆಲವು ಸಮಸ್ಯೆಗಳೆಂದರೆ–

- ಚಿಕ್ಕ ಗಾತ್ರದ ತಲೆಬುರುಡೆ
- ವಿಶಿಷ್ಟ ಮುಖಚರ್ಯೆ: ಚಪ್ಪಟೆ ಮೂಗು, ಚಿಕ್ಕ ಕಣ್ಣು, ತೆಳುವಾದ ಮೇಲ್ತುಟಿ, ಹೊರಚಾಚಿದ ದವಡೆ ಇತ್ಯಾದಿ * ಹೃದಯ ವೈಕಲ್ಯಗಳು
- ಬುದ್ಧಿಮಾಂದ್ಯತೆ
- ಕೈಕಾಲುಗಳ ಅಸಮರ್ಪಕ ಬೆಳವಣಿಗೆ
- ಕೈಕಾಲುಗಳಲ್ಲಿ ಅನೈಚ್ಛಿಕ ಚಲನೆ ಇತ್ಯಾದಿ

ಮದ್ಯ ಸೇವನೆ ಮಾಡುವ ಬಾಣಂತಿಯರಲ್ಲಿ, ಆಲ್ಕೋಹಾಲ್ ಎದೆಹಾಲಿನ ಮುಖಾಂತರ ಮಗುವಿಗೆ ರವಾನೆಯಾಗಬಹುದಾದರೂ ಅದು ಅತ್ಯಲ್ಪ ಪ್ರಮಾಣದಲ್ಲಿರುವುದರಿಂದ ಅಂತಹ ಗಂಭೀರ ಸ್ವರೂಪದ ಪರಿಣಾಮ ಮಗುವಿನಲ್ಲಿ ಕಾಣಿಸಿಕೊಳ್ಳಲಾರದು.

## ಧೂಮಪಾನದ ಪರಿಣಾಮ

ಗರ್ಭಿಣಿಯು ಧೂಮಪಾನದ ವ್ಯಸನ ಅಂಟಿಸಿಕೊಂಡಿದ್ದರೆ ಅದರ ಪರಿಣಾಮಗಳು ಗರ್ಭಾವಸ್ಥೆಯ ಎರಡನೇ ತ್ರೈಮಾಸಿಕದಲ್ಲಿ ಅತ್ಯಧಿಕವಾಗಿರುತ್ತವೆ. ಪ್ಲಾಸೆಂಟ (ಮಾಸು) ದಲ್ಲಿ ಸರಾಗ ರಕ್ತ ಸಂಚಾರಕ್ಕೆ ಅಡಚಣೆಯುಂಟಾಗಿ ಭ್ರೂಣಕ್ಕೆ ಆಮ್ಲಜನಕದ ಕೊರತೆಯುಂಟಾಗುತ್ತದೆ.

ಕೆಲವು ಲಕ್ಷಣಗಳೆಂದರೆ

- ಭ್ರೂಣದ ಬೆಳವಣಿಗೆಯಲ್ಲಿ ಕುಂಠಿತ
- ಕಡಿಮೆ ತೂಕದ ಶಿಶುವಿನ ಜನನ
- ಚಿಕ್ಕ ಗಾತ್ರದ ತಲೆಬುರುಡೆಯ ಶಿಶು

ಬಾಣಂತಿಯು ಧೂಮಪಾನ ಮಾಡುತ್ತಿದ್ದರೆ ಶಿಶುವಿನಲ್ಲಿ ಅಕಾರಣ ಮರಣದ ಪ್ರಮಾಣ ಹೆಚ್ಚು. ಹಾಗೆಯೇ ಪರೋಕ್ಷವಾಗಿ ನಿಕೋಟಿನ್ ಅನ್ನು ಸೇವಿಸುವ ಶಿಶುವಿನಲ್ಲಿ ಆಸ್ತಮಾ ಕಾಯಿಲೆಯ ಸಂಭವ ಹೆಚ್ಚು. ■

# ಏನಿದು ಎಲೆಕ್ಟ್ರೋಥೆರಪಿ?

**ಸಂಧಿನೋವು, ಕಾಲು ಕೀಲು ನೋವು ಮುಂತಾದವುಗಳನ್ನು ಔಷಧಿ ಇಲ್ಲದೆ ವಿದ್ಯುತ್ ಪ್ರಚೋದಕಗಳನ್ನು ನೀಡುವ ಮೂಲಕ ಗುಣಪಡಿಸುವ ಚಿಕಿತ್ಸೆಯೇ ಎಲೆಕ್ಟ್ರೋಥೆರಪಿ.**

■ **ಯು.ಎ.**

ಎಲೆಕ್ಟ್ರೊಥೆರಪಿ ಎಂಬುದು ಒಂದು ರೀತಿಯ ದೈಹಿಕ ಚಿಕಿತ್ಸೆ. ಇದರಿಂದ ನೋವು ನಿವಾರಣೆಯಾಗುತ್ತದೆ. ರಕ್ತ ಪರಿಚಲನೆ ಸುಗಮವಾಗುತ್ತದೆ. ಚಯಾಪಚಯ ಕ್ರಿಯೆಗಳು ಸರಿಯಾಗುತ್ತದೆ. ನಿರ್ದಿಷ್ಟ ರೋಗಲಕ್ಷಣಗಳನ್ನು ಅವಲಂಬಿಸಿ, ದೇಹದ ವಿವಿಧ ಅಂಗಗಳಲ್ಲಿ ವಿಭಿನ್ನ ಆವರ್ತನಗಳನ್ನು (ಗಾಲ್ವನಿಕ್, ಕಡಿಮೆ, ಮಧ್ಯಮ, ಅಧಿಕ ಆವರ್ತನ ಪ್ರವಾಹ) ಚಿಕಿತ್ಸಕವಾಗಿ ಬಳಸಲಾಗುತ್ತದೆ. ವಿದ್ಯುತ್ ಪ್ರಚೋದಕಗಳ ಮೂಲಕ ನೀಡುವ ಎಲೆಕ್ಟ್ರೊಥೆರಪಿಯು ನರಗಳನ್ನು ಪ್ರಚೋದಿಸುವ ಕೆಲಸ ಮಾಡುತ್ತದೆ.

ಎಲೆಕ್ಟ್ರೊ ಥೆರಪಿ, ಎಲೆಕ್ಟ್ರೊ ಮೆಡಿಸಿನ್, ಸ್ಟಿಮುಲೇಶನ್ ಕರೆಂಟ್ ಥೆರಪಿ ಎಂದೆಲ್ಲ ಕರೆಸಿಕೊಳ್ಳುವ ಈ ಚಿಕಿತ್ಸೆ, ಔಷಧಿಯಿಲ್ಲದೆ ನೀಡುವ ನೋವು ನಿವಾರಕ ಚಿಕಿತ್ಸೆ. ಈ ಚಿಕಿತ್ಸೆ ವಿದ್ಯುತ್ ಪ್ರವಾಹಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ದೇಹದಲ್ಲಿ ವಿಭಿನ್ನ ಜೈವಿಕ ಪರಿಣಾಮಗಳನ್ನು ಬೀರುತ್ತದೆ.

ದೇಹದಲ್ಲಿರುವ ಸ್ನಾಯುಗಳನ್ನು ಸಡಿಲಗೊಳಿಸಲು, ರಕ್ತ ಪರಿಚಲನೆಯನ್ನು ಉತ್ತೇಜಿಸಲು, ನೋವು ಕಡಿಮೆ ಮಾಡಲು ಈ ಥೆರಪಿಯನ್ನು ಮಾಡಲಾಗುತ್ತದೆ.

### ಪ್ರಯೋಜನಗಳೇನು?

ಸಂಧಿವಾತ, ಕಾಲು, ಕೀಲು ನೋವು, ಜಜ್ಜಿದ ಗಾಯ ಮುಂತಾದ ದೀರ್ಘಕಾಲಿಕ ನೋವಿಗೆ ಯಾವುದೇ ಮಾತ್ರೆ, ಇಂಜೆಕ್ಷನ್‌ಗಳಿಂದ ಪ್ರಯೋಜನವಾಗದು. ಇಂತಹ ಸಂದರ್ಭದಲ್ಲಿ ವೈದ್ಯರು ಫಿಸಿಯೊಥೆರಪಿ, ಎಲೆಕ್ಟ್ರೊಥೆರಪಿ ಮುಂತಾದವುಗಳನ್ನು ಸಲಹೆ ಮಾಡುತ್ತಾರೆ. ಎಲೆಕ್ಟ್ರೊಥೆರಪಿಯಲ್ಲಿ ನುರಿತ ಚಿಕಿತ್ಸಕ ವಿದ್ಯುತ್ ಪ್ರವಾಹವನ್ನು ರೋಗಿಯ ಅಂಗಾಂಶದ ಮೇಲೆ ವಿಭಿನ್ನ ಪರಿಣಾಮಗಳನ್ನು ಬೀರುತ್ತದೆ.

- ರಕ್ತ ಪರಿಚಲನೆಯನ್ನು ಸರಾಗಗೊಳಿಸುತ್ತದೆ





ಎಲೆಕ್ಟ್ರೋಥೆರಪಿಸ್ಟ್ ಸಂಗೀತಾ

- ಸ್ನಾಯುಗಳ ಚಟುವಟಿಕೆಯನ್ನು ಪ್ರಚೋದಿಸುತ್ತದೆ
- ತೀವ್ರ ನೋವನ್ನು ನಿವಾರಿಸುತ್ತದೆ
- ಚಯಾಪಚಯ ಕ್ರಿಯೆಯ ದೋಷವನ್ನು ಸರಿಪಡಿಸುತ್ತದೆ
- ಪಾರ್ಶ್ವವಾಯು ಇದ್ದವರಿಗೆ ಅನುಕೂಲಕರ

'ಇದೊಂದು ಸರಳ ಚಿಕಿತ್ಸೆ. ನರದೌರ್ಬಲ್ಯ, ರಕ್ತ ಸಂಚಾರ ತೊಂದರೆ, ಮಂಡಿ ನೋವು, ಸೊಂಟ, ಬೆನ್ನು, ಕತ್ತು ನೋವು ಇರುವವರಿಗೆ ಈ ಥೆರಪಿಯಿಂದ ಪರಿಹಾರ ದೊರೆಯುತ್ತದೆ. ಸಂಧಿವಾತ ನಿವಾರಣೆಯಾಗುತ್ತದೆ' ಎಂದು ಹೇಳುತ್ತಾರೆ ಬೆಂಗಳೂರಿನ ಶೇಷಾದ್ರಿಪುರಂನಲ್ಲಿರುವ ಶ್ರೀಶಕ್ತಿ ಹೆಲ್ತ್‌ಕೇರ್‌ನ ಎಲೆಕ್ಟ್ರೊಥೆರಪಿಸ್ಟ್ ಸಂಗೀತಾ.

### ಅಡ್ಡ ಪರಿಣಾಮವೂ ಇಲ್ಲದಿಲ್ಲ

ಎಲೆಕ್ಟ್ರೊಥೆರಪಿಯೊಂದಿಗಿನ ಅತ್ಯಂತ ಸಾಮಾನ್ಯ ಅಡ್ಡ ಪರಿಣಾಮ ಚರ್ಮದ ಕಿರಿಕಿರಿ ಅಥವಾ ದದ್ದು. ಥೆರಪಿ ನೀಡುವಾಗ ವಿದ್ಯುದ್ವಾರಗಳನ್ನು ಚರ್ಮದ ಮೇಲೆ ಅಂಟಿಸುವುದರಿಂದ ಕೆಲವೊಮ್ಮೆ ಅಲರ್ಜಿ ಉಂಟಾಗಿ ದದ್ದು ಆಗಬಹುದು.

ಎಲೆಕ್ಟ್ರೊಥೆರಪಿ ಸರಿಯಾಗಿ ಮಾಡದೇ ಇದ್ದಲ್ಲಿ ಅಪಾಯವೂ ಇದೆ. ಚಿಕಿತ್ಸೆ ನೀಡುವಲ್ಲಿ ಕೊಂಚ ಎಡವಿದರೂ ಚರ್ಮ ಹಾನಿ ಆಗಬಹುದು. ಕೆಲವರಿಗೆ ಹೃದಯ ಬಡಿತ ಪ್ರಕ್ರಿಯೆಯಲ್ಲಿ ಏರುಪೇರು ಆಗಲೂಬಹುದು. ಗರ್ಭಿಣಿಯರು ಎಲೆಕ್ಟ್ರೊ ಥೆರಪಿ ಮಾಡಿಸಿಕೊಳ್ಳಬಾರದು. ಗರ್ಭಧಾರಣೆ ಸಂದರ್ಭದಲ್ಲಿ ಈ ಚಿಕಿತ್ಸೆಯಿಂದ ಭ್ರೂಣಕ್ಕೆ ಹಾನಿಯಾಗುವ ಅಪಾಯವಿದೆ.

**ಬೆಂಗಳೂರಿನ ಶಕ್ತಿ ಹೆಲ್ತ್ ಕೇರ್**
**ಸಂಪರ್ಕ: 9740142206**